| O.S 42/2010 | DW-2 |
|---|---|

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 27.03.2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು:- ವಾದಿ ಪರ ವಕೀಲರಾದಃ ಶ್ರೀ PR ರವರಿಂದ:-**

ವಾದಿ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಗೊತ್ತು. ಪ್ರಭುಸ್ವಾಮಿರವರು ಮಹದೇವಪ್ಪನವರ ವಿರುದ್ಧ ಭೋಗ್ಯ ತೀರುವಳಿಗಾಗಿ ದಾವೆಯನ್ನು ಹೂಡಿರುತ್ತಾರೆ ಎಂದರೆ ಗೊತ್ತಿಲ್ಲ. ಬಸಪ್ಪನವರು ಸಿದ್ದರಾಜಪ್ಪರವರಿಗೆ ಭೋಗ್ಯವನ್ನ ಮಾಡಿರುತ್ತಾರೆ ಎಂಬ ವಿಚಾರ ನನ್ನ ತಂದೆ ನನಗೆ ಹೇಳಿರುತ್ತಾರೆ. ನನಗೆ ಭೋಗ್ಯ ಆಗಿರುವ ವಿಚಾರ ವ್ಯಯಕ್ತಿಕವಾಗಿ ಗೊತ್ತಿಲ್ಲ. ಶಿವಣ್ಣರವರು ಆಲ್ದೂರು ಗ್ರಾಮದವರು. ಶಿವಣ್ಣರವರು ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದರು. ಶಿವಣ್ಣರವರು ಕೆಲಸದಿಂದ ನಿವೃತ್ತಿ ಹೊಂದುವ ಸಂದರ್ಭದಲ್ಲಿ ಯಾವ ಗ್ರಾಮದ ನ್ಯಾಯಾಲಯದಲ್ಲಿ ಅಮೀನರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಸದರಿ ಶಿವಣ್ಣರವರ ತಂದೆಯ ಹೆಸರು ಪೊಲೀಸ್ ಬಸಪ್ಪ. ಸದರಿ ಪೊಲೀಸ್ ಬಸಪ್ಪ ಆಲ್ದೂರು ಗ್ರಾಮದವರು. ಸದರಿ ಶಿವಣ್ಣರವರು ಮೈಸೂರಿನಲ್ಲು ಮತ್ತು ಆಲ್ದೂರಿನಲ್ಲು ಸಹ ಇರುತ್ತಿದ್ದರು. ಶಿವಣ್ಣರವರು ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುತ್ತೇನೆ. ಆಧಾರ್ ಕಾರ್ಡನ್ನು ನೋಡಿರುತ್ತೇನೆ.

ಭೋಗ್ಯವಾಗಿರುವ ಬಗ್ಗೆ ಮಾತ್ರ ಗೊತ್ತು ಯಾವಾಗ ತೀರುವಳಿ ಆಗಿರುತ್ತದೆ ಎಂದು ಗೊತ್ತಿಲ್ಲ. ಭೋಗ್ಯ ತೀರುವಳಿಯನ್ನು ಯಾರು ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಭೋಗ್ಯ ತೀರುವಳಿ ಆದ ಪತ್ರ ಶಿವಣ್ಣ ನನಗೆ ತೋರಿಸಿರುವುದಿಲ್ಲ. ಭೋಗ್ಯ ಪತ್ರ ನೋಂದಣಿ ಆಗಿರುತ್ತದೆಯೇ ಅಥವಾ ಇಲ್ಲವೇ ಎಂದರೆ ಗೊತ್ತಿಲ್ಲ. ಭೋಗ್ಯವು 1 ಎಕರೆ 26 ಗುಂಟೆಗೆ ಆಗಿರುತ್ತದೆ. ವಾದಿಯ ಪ್ರಕಾರ ಇಂದಿಗೂ ಭೋಗ್ಯ ತೀರುವಳಿ ಆಗಿರುವುದಿಲ್ಲ ಎಂದರೆ ಗೊತ್ತಿಲ್ಲ. ಎಷ್ಟು ಹಣಕ್ಕೆ ಭೋಗ್ಯ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಶಿವಣ್ಣರವರು ಭೋಗ್ಯ ತೀರುವಳಿ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆ ಮೃತಪಟ್ಟು ಸುಮಾರು 15 ವರ್ಷ ಆಗಿರುತ್ತದೆ.

ಭೋಗ್ಯ ತೀರುವಳಿ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ ಶಿವಣ್ಣ, ಪಶ್ಚಿಮಕ್ಕೆ ಸೋಮಣ್ಣನವರ ಆಸ್ತಿ, ದಕ್ಷಿಣಕ್ಕೆ ಮಹದೇವಪ್ಪನವರ ಜಮೀನು, ಉತ್ತರಕ್ಕೆ ನೀರು ಹರಿಯುವ

ಹಳ್ಳ ಇರುತ್ತದೆ. ವಾದಿಯು ಪ್ರತಿವಾದಿಗಳ ವಿರುದ್ಧ ಭೋಗ್ಯ ತೀರುವಳಿಗಾಗಿ ದಾವೆಯನ್ನು ಹಾಕಿದ್ದು, ಈ ಹಿಂದೆ ಶಿವಣ್ಣ ಭೋಗ್ಯ ತೀರುವಳಿಯನ್ನು ಮಾಡಿಕೊಂಡಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಗೊತ್ತಿಲ್ಲ. ಶಿವಣ್ಣರವರು ದಾವೆ ಜಮೀನನ್ನು ನೋಡಿಕೊಳ್ಳಲು ಹೇಳಿರುತ್ತಾರೆ ನಾನು ನೋಡಿಕೊಳ್ಳುತ್ತಿದ್ದೇನೆ. ಶಿವಣ್ಣ ಬದುಕಿದ್ದಾಗ ದಾವಾ ಆಸ್ತಿಯಲ್ಲಿ ಅವರು ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಉಸ್ತುವಾರಿ ನೋಡಿಕೊಳ್ಳುವ ಬಗ್ಗೆ ಶಿವಣ್ಣ ಬರವಣಿಗೆಯಲ್ಲಿ ಮಾಡಿಕೊಟ್ಟಿರುವುದಿಲ್ಲ, ದಿನಕ್ಕೆ ರೂ.400/-ಗಳನ್ನು ಜಮೀನು ನೋಡಿಕೊಳ್ಳಲು ನನಗೆ ಶಿವಣ್ಣ ಕೊಡುತ್ತಿದ್ದರು ಮತ್ತು ಭತ್ತವನ್ನು ಶಿವಣ್ಣ ತೆಗೆದುಕೊಳ್ಳುತ್ತಿದ್ದು ಹುಲ್ಲನ್ನು ನಾವು ತೆಗೆದುಕೊಳ್ಳುತ್ತಿದ್ದೆವು. ಶಿವಣ್ಣರವರ ಜಮೀನನ್ನು ನಾನು ನೋಡಿಕೊಳ್ಳಲು ಬರವಣಿಗೆಯನ್ನು ತೆಗೆದುಕೊಳ್ಳಲು ತೊಂದರೆ ಇತ್ತೆ ಎಂದರೆ ಇರಲಿಲ್ಲ. ಶಿವಣ್ಣ ಸ್ವಾಧೀನದಲ್ಲಿ ಇರಲಿಲ್ಲ ಆದ್ದರಿಂದ ನೋಡಿಕೊಳ್ಳುವು ಉಸ್ತುವಾರಿಯನ್ನು ನಾನು ಬರವಣಿಗೆ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಶಿವಣ್ಣ ಸ್ವಾಧೀನದಲ್ಲಿ ಇದ್ದರು ಮತ್ತು ನಾನು ಉಸ್ತುವಾರಿ ನೋಡಿಕೊಳ್ಳುತ್ತಿದ್ದೆ ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಶಿವಣ್ಣರವರ ತಂದೆ ತಾಯಿ ಮೂಲತಃ ಮೈಸೂರಿನವರು ಆಲ್ದೂರು ಗ್ರಾಮದವರಾಗಿವುದಿಲ್ಲ ಎಂದರೆ ಸರಿಯಲ್ಲ. ಬಸಪ್ಪ ಮತ್ತು ಶಿವಣ್ಣರವರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ಬಸಪ್ಪರವರ ಮಗ ಎಂದು ಗೊತ್ತಿದ್ದರೂ ಸಹ ನಾನು ಪ್ರತಿವಾದಿಗಳ ಮಾತು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಣ್ಣರವರ ಮಕ್ಕಳು ಸಹ ಆಲ್ದೂರು ಗ್ರಾಮದವರಾಗಿವುದಿಲ್ಲ ಮೈಸೂರು ಗ್ರಾಮದವರೆ ಎಂದರೆ ಸರಿಯಲ್ಲ.

ಶಿವಣ್ಣ ನನಗೆ ಸಂಬಂಧಿಕ. ಶಿವಣ್ಣ ನನಗೆ ಸಂಬಂಧಿಕರಾಗಿದ್ದರಿಂದ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಬಸಪ್ಪರವರ ಮಗ ಎಂದು ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಣ್ಣರವರು ನ್ಯಾಯಾಲಯದ ಕೆಲಸದಲ್ಲಿದ್ದರಿಂದ ಪ್ರಭುಸ್ವಾಮಿ ಬಸಪ್ಪರವರ ಮಗ ಎಂದು ಗೊತ್ತಿದ್ದರೂ ಸಹ ದಾವಾ ಆಸ್ತಿಯನ್ನು ಹೊಡೆದುಕೊಳ್ಳುವ ದುರುದ್ದೇಶದಿಂದ ಬಸಪ್ಪನ ಮಗ ಶಿವಣ್ಣ ನಾನೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ವಾದಿಗಾಗಲೀ ಅವರ ವಾರಸುದಾರರಿಗಗಲಿ ಮಾಲೀಕತ್ವದಲ್ಲಿ ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

| O.S 42/2010 | DW-2 |
| --- | --- |

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.